<u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 02.02.2016 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2016ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡಾವಳಿಗಳು.**

**<u>ಪ್ರಾಸ್ತಾವಿಕ</u>**

1. ಶ್ರೀ ಎಂ.ಪಿ.ನೊರೋನ್ಹ, ಸಿಂಡಿಕೇಟು ಸದಸ್ಯರು, ಸಲ್ಲಿಸಿರುವ ಪ್ರಸ್ತಾವನೆಯನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ, ತಾಂತ್ರಿಕ ನೌಕರರಿಗೆ ಕಿರಿಯ ಅಭಿಯಂತರ ಹುದ್ದೆಗೆ ಮುಂಭಡ್ತಿ ನೀಡುವ ಕುರಿತು ಸರ್ಕಾರಕ್ಕೆ ಪತ್ರ ವ್ಯವಹಾರ ಮಾಡಿ ಒಪ್ಪಿಗೆ ಪಡೆದುಕೊಳ್ಳುವುದು ಮತ್ತು ಸರ್ಕಾರದ ಇತರೆ ಯಾವುದೇ ವಿಭಾಗಗಳಲ್ಲಿ ಅಥವಾ ಸರ್ಕಾರದ ಸ್ವಾಯತ್ತ ಸಂಸ್ಥೆಗಳಲ್ಲಿ ಈ ತರಹದ ಸಿಬ್ಬಂದಿಗೆ ಮುಂಭಡ್ತಿ ನೀಡಿದ್ದರೆ ಆ ನಿಯಮಾವಳಿಗಳನ್ನು ಪಡೆದು, ಅದರಂತೆ ವಿಶ್ವವಿದ್ಯಾನಿಲಯದ ಎಲ್ಲಾ ರೀತಿಯ ತಾಂತ್ರಿಕ ಸಿಬ್ಬಂದಿಗಳಿಗೆ ಮುಂಭಡ್ತಿ ನೀಡಲು ಕ್ರಮಕೈಗೊಳ್ಳಬೇಕೆಂದು ತೀರ್ಮಾನಿಸಿತು.

Iನಡಾವಳಿಗಳ ದೃಢೀಕರಣ

1. ದಿನಾಂಕ 19.12.2015ರಂದು ನಡೆದ ಎಂಟನೆಯ ಸಾಮಾನ್ಯ ಸಭೆಯ ನಡಾವಳಿಯನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

   **ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ.8:2(2015)

   **ವಿಷಯ:** ಡಾ.ಅನಿತಾ ರವಿಶಂಕರ್, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗ ಇವರ ಮೇಲಿನ ಇಲಾಖಾ ವಿಚಾರಣಾ ವರದಿಯ ಬಗ್ಗೆ.

   **ನಿರ್ಣಯ:** ಡಾ. ಅನಿತಾ ರವಿಶಂಕರ್ ಇವರ ಮೇಲಿನ ಇಲಾಖಾ ವಿಚಾರಣೆ ವರದಿಯನ್ನು ಸಿಂಡಿಕೇಟು ಪರಿಶೀಲಿಸಿ ಶ್ರೀಮತಿ ಪೇಮಾ ಡಿ'ಸೋಜಾರವರ ಆಪಾದನೆಗಳು ಯಾವುದೇ ಸಾಕ್ಷಿ ಅಥವಾ ಪ್ರಮಾಣಗಳಿಲ್ಲದ ಕಾರಣ ಸತ್ಯವೆಂದು ಸಾಬೀತುಪಡಿಸುವಲ್ಲಿ ವಿಫಲವಾಗಿದೆ ಎಂಬ ತೀರ್ಮಾನವನ್ನು ಸಿಂಡಿಕೇಟು ಅಂಗೀಕರಿಸಿತು. ಇಲಾಖಾ ವಿಚಾರಣಾ ಸಮಿತಿ ವರದಿ ಪ್ರಕಾರ ಡಾ.ಅನಿತಾ ರವಿಶಂಕರ್ ಇವರ ಮೇಲಿನ ಆಪಾದನೆ ಸಾಬೀತಾಗಿಲ್ಲವಾದುದರಿಂದ ಡಾ.ಅನಿತಾ ರವಿಶಂಕರ್ ಅವರ ಅಮಾನತ್ತು ಅವಧಿಯನ್ನು (ಕಸ್ಟಡಿಯಲ್ಲಿದ್ದ ಅವಧಿಯನ್ನು ಹೊರತುಪಡಿಸಿ) ಕರ್ತವ್ಯದ ಮೇಲಿದ್ದ ಅವಧಿ ಎಂದು ಪರಿಗಣಿಸಿ ಸದರಿ ಅವಧಿಗೆ ಸಂಬಂಧಿಸಿದಂತೆ ತಡೆಹಿಡಿಯಲಾದ ಎಲ್ಲಾ ಸೇವಾ ಸೌಲಭ್ಯಗಳನ್ನು ನೀಡಲು ನಿರ್ಣಯಿಸಲಾಯಿತು.

   **ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ.8:21(2015)

   **ವಿಷಯ:** ಶ್ರೀ ಹುಕ್ರಪ್ಪ ನ್ಯಾಕ್ ಡಿ., ಸಹಾಯಕ ಕುಲಸಚಿವರು ಇವರು ನಕಲಿ ವೇತನ ದೃಢೀಕರಣ ಪತ್ರ ನೀಡಿರುವ ಬಗ್ಗೆ.

**ನಿರ್ಣಯ:** ಶ್ರೀ ಹುಕ್ರಪ್ಪ ನಾಯ್ಕ್ ಡಿ., ಸಹಾಯಕ ಕುಲಸಚಿವರು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರು ನೀಡಿರುವ ಸಮಜಾಯಿಕೆ ಸಮಂಜಸವಾಗಿರುವುದಿಲ್ಲ ಎಂದು ತೀರ್ಮಾನಿಸಿ ಸದರಿಯವರಿಗೆ ದಿನಾಂಕ 21.09.2015 ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಲ್ಲಿ ವಿಧಿಸಿರುವ ದಂಡನೆಯನ್ನು ಸ್ಥಿರೀಕರಿಸಲು ನಿರ್ಣಯಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು**

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ.1:1(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಯುಜಿಸಿ, ಡಿಎಸ್‌ಟಿ ಮತ್ತು ಕೇಂದ್ರ ಸರ್ಕಾರದ ಅನುದಾನ/ಇತರ ಪ್ರಸ್ತಾವನೆಗಳ ತ್ವರಿತ ವಿಲೇವಾರಿ / ಅನುಸರಣಾ ಕ್ರಮಗಳಿಗಾಗಿ (Follow up action) “Liaison Officer” ಒಬ್ಬರನ್ನು ನೇಮಕ ಮಾಡುವ ಬಗ್ಗೆ.

**ಸಭೆಯ ದಿನಾಂಕ: 02.02.2016**

**ನಿರ್ಣಯ:** “Liaison Officer” ನೇಮಕವನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ.1:2(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಕರ್ನಾಟಕ ಸರಕಾರದ ಅನುದಾನ/ಪ್ರಸ್ತಾವನೆ ಹಾಗೂ ಇತರ ಕೆಲಸ ಕಾರ್ಯಗಳ ತ್ವರಿತ ವಿಲೇವಾರಿ / ಅನುಸರಣಾ ಕ್ರಮಗಳಿಗಾಗಿ ಬೆಂಗಳೂರಿನಲ್ಲಿ “Liaison Officer” ಒಬ್ಬರನ್ನು ನೇಮಕ ಮಾಡುವ ಬಗ್ಗೆ.

**ಸಭೆಯ ದಿನಾಂಕ: 02.02.2016**

**ನಿರ್ಣಯ:** “Liaison Officer” ನೇಮಕವನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ.1:3(2016)

**ವಿಷಯ:** Erasmus Mundus IBIES scholarship ಪಡೆಯಲು ಡಾ.ಟಿ. ಮಲ್ಲಿಕಾರ್ಜುನಪ್ಪ, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ವ್ಯಾಸಂಗ ರಜೆ / ಅಧಿಕೃತ ಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಬಗ್ಗೆ.

**ಸಭೆಯ ದಿನಾಂಕ: 02.02.2016**

**ನಿರ್ಣಯ:** ನಿಯಮಗಳ ರೀತಿ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ.1:4(2016)

**ವಿಷಯ:** ಡಾ.ಜಯರಾಜ್ ಎನ್., ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ ದಿನಾಂಕ 23.01.2016 ಮತ್ತು 24.01.2016ರ ವರೆಗೆ PATTAYA THAILAND ಇಲ್ಲಿ ನಡೆಯುವ ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ದಿನಾಂಕ 22.01.2016 ರಿಂದ 25.01.2016ರ ವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಮೇಲಿನ ಸಮ್ಮೇಳನದಲ್ಲಿ ಭಾಗವಹಿಸಿ ಪತ್ರಿಕೆ ಮಂಡಿಸಲು ಅನುಮತಿ ಹಾಗೂ ಅಧಿಕೃತ ಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ.1:5(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರ ಹೆಚ್ಚುವರಿ ಹೊಣೆಗಾರಿಕೆಯನ್ನು ಮುಂದುವರಿಸಿರುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಪ್ರೊ.ಎಸ್.ಎಂ.ಧರ್ಮಪ್ರಕಾಶ್, ಪ್ರಾಧ್ಯಾಪಕರು, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಸೇವೆಯನ್ನು ಹೆಚ್ಚುವರಿ ಹೊಣೆಗಾರಿಕೆಯೊಂದಿಗೆ ಅಂಚೆತೆರಪಿನ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿ ದಿನಾಂಕ 10.12.2015 ರಿಂದ ಅನ್ವಯವಾಗುವಂತೆ ಮುಂದಿನ ಒಂದು ವರ್ಷದ ಅವಧಿಗೆ ಅಥವಾ ಈ ಕಚೇರಿಯ ಮುಂದಿನ ಆದೇಶದವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ) ದಿನಾಂಕ 02.01.2016ರಲ್ಲಿ ಹೊರಡಿಸಿರುವ ಆದೇಶವನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ.1:6(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ

**ಸಭೆಯ ದಿನಾಂಕ: 02.02.2016**

ನಿರ್ಣಯ: ಡಾ.ಪಿ.ಎಲ್.ಧರ್ಮ. ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಹಾಲಿ ಹುದ್ದೆಯ ಜೊತೆ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರಾಗಿ ಹೆಚ್ಚುವರಿ ಹೊಣೆಗಾರಿಕೆಯನ್ನು ದಿನಾಂಕ 31.10.2015 ರಿಂದ ಅನ್ವಯವಾಗುವಂತೆ ಮುಂದಿನ ಆರು ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ) ಹೊರಡಿಸಿರುವ ಆದೇಶವನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ.1:7(2016)

ವಿಷಯ: ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮುಂಭಡ್ತಿ ನೀಡುವಾಗ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಕಲ್ಪಿಸಿರುವ ಮೀಸಲಾತಿಯನ್ನು ಜಾರಿಗೊಳಿಸಲು ಅರ್ಹತಾ ಸೇವೆಯಲ್ಲಿ ಸಡಿಲಿಕೆ ನೀಡುವ ಬಗ್ಗೆ ಕರಡು ಪರಿನಿಯಮ ಅನುಮೋದನೆ ಕುರಿತು.

**ಸಭೆಯ ದಿನಾಂಕ: 02.02.2016**

ನಿರ್ಣಯ: ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮುಂಭಡ್ತಿ ನೀಡುವಾಗ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಕಲ್ಪಿಸಿರುವ ಮೀಸಲಾತಿಯನ್ನು ಜಾರಿಗೊಳಿಸಲು ಅರ್ಹತಾ ಸೇವೆಯಲ್ಲಿ ಸಡಿಲಿಕೆ ನೀಡುವ ಬಗ್ಗೆ ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾಸ.1:8(2016)

ವಿಷಯ: ಪದವಿ ಮಟ್ಟದ ಹೋಮ್ ಸೈನ್ಸ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 33(1) ಮತ್ತು (2)ರ ಪ್ರಕಾರ ಹಾಗೂ ಅಧ್ಯಯನ ಮಂಡಳಿ ಪರಿನಿಯಮ ಪಾರ 2ರ ಪ್ರಕಾರ ಪದವಿಮಟ್ಟದ ಹೋಮ್ ಸೈನ್ಸ್ ಅಧ್ಯಯನ ಮಂಡಳಿಯನ್ನು ರಚಿಸಲು ಸಿಂಡಿಕೇಟು ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು. ಅದೇ ರೀತಿ ಪದವಿಮಟ್ಟದ Food & Nutrition ಅಧ್ಯಯನ ಮಂಡಳಿಯನ್ನು ರಚಿಸಲು ಕೋರಿ ಸಭೆಯು ಪರಿಗಣಿಸಿ ಕುಲಪತಿಗಳಿಗೆ ಅಧಿಕಾರ ನೀಡಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾಸ.1:9(2016)

ವಿಷಯ: ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯ – ಸರಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು ಇದನ್ನು ಉಡುಪಿ ಜಿಲ್ಲೆಯ ಪ್ರಾದೇಶಿಕ ಕೇಂದ್ರವೆಂದು ಮಾನ್ಯತೆ ನೀಡುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯ – ಸರಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು ಇದನ್ನು ಉಡುಪಿ ಜಿಲ್ಲೆಯ ಪ್ರಾದೇಶಿಕ ಕೇಂದ್ರವೆಂದು ಮಾನ್ಯತೆ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾಸ.1:10(2016)

ವಿಷಯ: ಆಗಸ್ಟ್/ಸಪ್ಟೆಂಬರ್ 2015ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ಪೂರಕ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಪರೀಕ್ಷಾ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾಸ.1:11(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಸ್ವಾಯತ್ತ ಕಾಲೇಜುಗಳ ಕಾರ್ಯವೈಖರಿಯನ್ನು ವಾರ್ಷಿಕವಾಗಿ ಮರುಪರಿಶೀಲನೆ ಹಾಗೂ ಮರು ಮೌಲ್ಯಮಾಪನಗೊಳಿಸಲು ಸಮಿತಿ ರಚನೆ ಬಗ್ಗೆ.

**ಸಭೆಯ ದಿನಾಂಕ: 02.02.2016**

**ನಿರ್ಣಯ:** ಸ್ವಾಯತ್ತ ಕಾಲೇಜುಗಳ ಕಾರ್ಯ ವೈಖರಿಯನ್ನು ವಾರ್ಷಿಕವಾಗಿ ಪರಿಶೀಲನೆ ಹಾಗೂ ಮೌಲ್ಯಮಾಪನಗೊಳಿಸುವ ಬಗ್ಗೆ ಚರ್ಚಿಸಿ ನಿಯಮಗಳ ರೀತಿಯಲ್ಲಿ ಹಾಗೂ ಪ್ರತೀ ಸಮಿತಿಯಲ್ಲಿ ಒಬ್ಬ ಸಿಂಡಿಕೇಟು ಸದಸ್ಯರಿರುವಂತೆ ಸಮಿತಿ ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾಸ.1:12(2016)

**ವಿಷಯ:** ಸಂತ ಆಗ್ನೆಸ್ ಕಾಲೇಜು(ಸ್ವಾಯತ್ತ), ಮಂಗಳೂರು ಇಲ್ಲಿನ ವಿದ್ಯಾರ್ಥಿಗಳಿಗೆ ನೀಡಿರುವ ಅಂಕಪಟ್ಟಿಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಯೋಜನೆಗೆ ವ್ಯತಿರಿಕ್ತವಾಗಿ ಕ್ರೆಡಿಟ್‌ಗಳನ್ನು ನೀಡಿರುವ ಬಗ್ಗೆ.

**ಸಭೆಯ ದಿನಾಂಕ: 02.02.2016**

**ನಿರ್ಣಯ:** ಶೈಕ್ಷಣಿಕ ವರ್ಷ 2014–15ನೇ ಸಾಲಿನವರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಯೋಜನೆಗೆ ವ್ಯತಿರಿಕ್ತವಾಗಿ ಈಗಾಗಲೇ ಕ್ರೆಡಿಟ್‌ಗಳನ್ನು ನೀಡಿರುವ ಕಾರಣ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 2ನೇ ಮತ್ತು 3ನೇ ವರ್ಷಗಳ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಸದ್ರಿ ಕ್ರೆಡಿಟ್‌ಗಳನ್ನು ಮುಂದುವರಿಸುವುದು ಮತ್ತು ಶೈಕ್ಷಣಿಕ ವರ್ಷ 2015–16ನೇ ಸಾಲಿಗೆ ಪ್ರಥಮ ವರ್ಷದ ಪದವಿ ಕೋರ್ಸಿಗೆ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವಿನಿಯಮದಂತೆಯೇ ಕ್ರೆಡಿಟ್‌ಗಳನ್ನು ನೀಡುವಂತೆ ತಿಳಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾಸ.1:13(2016)

**ವಿಷಯ:** ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು ಎಂಬ ವಿದ್ಯಾಸಂಸ್ಥೆಯು ಶೈಕ್ಷಣಿಕ ವರ್ಷ 2015–16ನೇ ಸಾಲಿನಲ್ಲಿ ಎಂ.ಎ. (ಅಪ್ಲೈಡ್ ಇಕಾನಮಿಕ್ಸ್) ಪದವಿಗೆ ನಿಗದಿಪಡಿಸಿರುವ ಪ್ರವೇಶಾರ್ಹತೆ ಪ್ರಕಾರ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳನ್ನು ಎಂ.ಎ.(ಇಕಾನಮಿಕ್ಸ್) ಪದವಿಗೆ ಪ್ರವೇಶಾತಿ ಮಾಡಿರುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: 2015–16ರ ಸಾಲಿಗೆ ಮಾತ್ರ ಎಂ.ಎ (ಅಪ್ಲೈಡ್ ಇಕಾನಮಿಕ್ಸ್) ಕೋರ್ಸನ್ನು ನಡೆಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸತಕ್ಕದ್ದು ಎಂದು ತೀರ್ಮಾನಿಸಲಾಯಿತು. ಇನ್ನು ಮುಂದೆ ಸದರಿ ಕಾಲೇಜು ಈ ರೀತಿಯ ತಪ್ಪನ್ನು ಮಾಡದಂತೆ ತಿಳುವಳಿಕೆ ಪತ್ರವನ್ನು ನೀಡುವಂತೆ ಸಿಂಡಿಕೇಟು ಸಭೆಯು ತೀರ್ಮಾನಿಸಿತು. ಜೊತೆಗೆ ಸ್ವಾಯತ್ತ ಕಾಲೇಜುಗಳ ಕಾರ್ಯ ವೈಖರಿ ಮತ್ತು ಇತರೆ ವಿಚಾರಗಳ ಬಗ್ಗೆ ಅಧ್ಯಯನ ಮಾಡಿ ವರದಿ ಮಾಡಲು ಪ್ರೊ.ಎಸ್.ಎನ್.ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ಸಭೆಯು ಕುಲಪತಿಗಳಿಗೆ ಅಧಿಕಾರ ನೀಡಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾಸ.1:14(2016)

**ವಿಷಯ:** ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ಶುಚಿತ್ವ ವ್ಯವಸ್ಥೆಯ ಗುತ್ತಿಗೆ ಅವಧಿ ವಿಸ್ತರಣೆ – ಘಟನೋತ್ತರ ಅನುಮೋದನೆಗಾಗಿ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ಕಾಲೇಜಿನ ಶುಚಿತ್ವ ವ್ಯವಸ್ಥೆಯ ಗುತ್ತಿಗೆ ಅವಧಿಯನ್ನು ಅದೇ ದರ ಮತ್ತು ಷರತ್ತಿನೊಂದಿಗೆ ದಿನಾಂಕ 30.04.2016ರ ವರೆಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾಸ.1:15(2016)

ವಿಷಯ: ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ಕುಶಾಲನಗರ ಮತ್ತು ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ಭದ್ರತಾ ವ್ಯವಸ್ಥೆಯ ಗುತ್ತಿಗೆ ಅವಧಿ ವಿಸ್ತರಣೆ – ಘಟನೋತ್ತರ ಅನುಮೋದನೆಗಾಗಿ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ಕಾಲೇಜುಗಳ ಭದ್ರತಾ ವ್ಯವಸ್ಥೆಯ ಗುತ್ತಿಗೆ ಅವಧಿಯನ್ನು ಅದೇ ದರ ಮತ್ತು ಷರತ್ತಿನೊಂದಿಗೆ ದಿನಾಂಕ 30.04.2016ರವರೆಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾಸ.1:16(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರಕ್ಕೆ ನಿರ್ದೇಶಕರನ್ನು ನೇಮಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಡಾ.ದನಂಜಯ ಕುಂಬ್ಳೆ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ತಮ್ಮ ದೈನಂದಿನ ಕರ್ತವ್ಯದ ಜೊತೆಗೆ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರಕ್ಕೆ ಸಂಯೋಜಕರನ್ನಾಗಿ ನೇಮಿಸುವ ಪ್ರಸ್ತಾವನೆಗೆ ಸಿಂಡಿಕೇಟು ಸಭೆಯು ಅನುಮೋದನೆ ನೀಡಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ.1:17(2016)

ವಿಷಯ: ಡಾ.ಸಿ.ಕೆ. ಹೆಬ್ಬಾರ್, ಸಹ ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ 17.04.2016 ರಿಂದ 21.04.2016ರವರೆಗೆ Vienna, Austria ಇಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪತ್ರಿಕೆ ಮಂಡಿಸಲು ಭಾಗವಹಿಸುವ ಸಲುವಾಗಿ ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ದಿನಾಂಕ 17.04.2016 ರಿಂದ 25.04.2016ರ ವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಮೇಲಿನ ಸಮ್ಮೇಳನದಲ್ಲಿ ಭಾಗವಹಿಸಿ ಪತ್ರಿಕೆ ಮಂಡಿಸಲು ಅನುಮತಿ ಹಾಗೂ ಅಧಿಕೃತ ಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಹವಿ ಸಾಸ.1:18(2016)

ವಿಷಯ: ಹಣಕಾಸು ವಿಭಾಗದ ವೋಚರ್ / ರೆಕಾರ್ಡ್‌ಗಳ ನಿರ್ವಹಣೆ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಹಣಕಾಸು ವಿಭಾಗಕ್ಕೆ ಸಂಬಂಧಿಸಿದ ವೋಚರ್ /ಕಡತ/ರಿಜಿಸ್ಟರ್‌ಗಳನ್ನು KFC Article 399 ರ ಪ್ರಕಾರ ಅವಶ್ಯಕತೆಗಳಿಗೆ ಅನುಸಾರವಾಗಿ ಮತ್ತು KSU Act 29 (f) ಪ್ರಕಾರ ಕ್ರಮಕ್ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. ಜೊತೆಗೆ ಈಗಾಗಲೇ ಚಾಲ್ತಿಯಲ್ಲಿರುವ ವಿಚಾರಣಾ ವಿಷಯಗಳ ಬಗ್ಗೆ ಬೇಕಾಗುವ ದಾಖಲೆಗಳ ಅವಶ್ಯಕತೆಗಳನ್ನು ಪರಿಗಣಿಸಿ ಸೂಕ್ತ ಕ್ರಮಕ್ಕೈಗೊಳ್ಳಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾಸ.1:19(2016)

ವಿಷಯ: ಪಿಹೆಚ್.ಡಿ. ಪದವಿ ಪ್ರದಾನ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಮಂಗಳೂರು ವಿಶ್ವವಿದ್ಯನಿಲಯದಲ್ಲಿ ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ. ಪದವಿ ಪ್ರದಾನ ಮಾಡಲು ಶಿಫಾರಸ್ಸು ಮಾಡಲಾಗಿದ್ದ ಸ್ವೀಕೃತ ಪಟ್ಟಿಯ ಒಟ್ಟು 20 ವಿದ್ಯಾರ್ಥಿಗಳಿಗೆ ದಿನಾಂಕ 02.02.2016 ರಂದು ನಡೆದ ಸಿಂಡಿಕೇಟು ಸಭೆಯು ಅನುಮೋದನೆ ನೀಡಿ ಪಿಹೆಚ್.ಡಿ. ಪದವಿ ಪ್ರದಾನ ಮಾಡಲು ಶಿಫಾರಸ್ಸು ಮಾಡಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾಸ.1:20(2016)

ವಿಷಯ: ನವೆಂಬರ್/ಡಿಸೆಂಬರ್ 2015ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ಸಭೆಯ ದಿನಾಂಕ: 02.02.2016**

ನಿರ್ಣಯ: ವಿಶ್ವವಿದ್ಯಾನಿಲಯ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿಯ ವರದಿಯನ್ನು ದಿನಾಂಕ 02.02.2016ರಂದು ನಡೆದ ಸಿಂಡಿಕೇಟು ಸಭೆಯು ಅಂಗೀಕರಿಸಿತು. ಜೊತೆಗೆ ಪದೇ ಪದೇ ಪರೀಕ್ಷಾ ಅವ್ಯವಹಾರ ನಡೆಯುತ್ತಿರುವ ಕಾಲೇಜುಗಳನ್ನು ಗುರುತಿಸಿ ಅಂತಹ ಕಾಲೇಜುಗಳಿಗೆ ಪರೀಕ್ಷಾ ಕೇಂದ್ರ ವ್ಯವಸ್ಥೆಯನ್ನು ಅನಧಿಕೃತಗೊಳಿಸಲು ಮುಂದಿನ ವರ್ಷಗಳಿಂದ ಕ್ರಮಕೈಗೊಳ್ಳುವಂತೆಯೂ ಸಿಂಡಿಕೇಟು ಸಭೆಯು ತೀರ್ಮಾನಿಸಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾಸ.1:21(2016)

ವಿಷಯ: ಆಗಸ್ಟ್/ಸಪ್ಟೆಂಬರ್ 2015ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ಪೂರಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಆಗಸ್ಟ್/ಸಪ್ಟೆಂಬರ್ 2015ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ಪೂರಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ವಿಶ್ವವಿದ್ಯಾನಿಲಯ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿಯು ಸಲ್ಲಿಸಿದ್ದ ವರದಿಯನ್ನು ಸಿಂಡಿಕೇಟು ಸಭೆಯು ಒಪ್ಪಿ ಅನುಮೋದಿಸಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾಸ.1:22(2016)

ವಿಷಯ: ಶ್ರೀ ಮೋಹನಚಂದ್ರನ್ ನಂಬಿಯಾರ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು

ಪ್ರಸ್ತಾವನೆ 1. Commencement of degree courses in the 1st week of June 2016.

ಪ್ರಸ್ತಾವನೆ 2. Extension of the activities of the correspondence courses to all the Taluk head quarters of the university area and other matters relating to correspondence courses.

ಪ್ರಸ್ತಾವನೆ 3. Fixation of UG Examination Date well in advance

ಪ್ರಸ್ತಾವನೆ 4. Sri Narayanaguru Adhyana Kendra

**ಸಭೆಯ ದಿನಾಂಕ: 02.02.2016**

ನಿರ್ಣಯ: ಪ್ರಸ್ತಾವನೆ ಕ್ರ.ಸಂ.1ಕ್ಕೆ ಸಂಬಂಧಿಸಿದಂತೆ, ಸರಕಾರದ ಆದೇಶ ಸಂಖ್ಯೆ ಇಡಿ 534 ಯುಆರ್‌ಸಿ 2013, ಬೆಂಗಳೂರು ದಿನಾಂಕ 6.01.2014ರಲ್ಲಿ ರಾಜ್ಯದಲ್ಲಿರುವ ಎಲ್ಲಾ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳು ಶೈಕ್ಷಣಿಕ ವರ್ಷ 2014–15ನೇ ಸಾಲಿನಿಂದ ಪದವಿ ತರಗತಿಗಳ ಪ್ರಾರಂಭದ ಏಕರೂಪದ ವೇಳಾಪಟ್ಟಿಯನ್ನು ಅನುಸರಿಸಲು ತಿಳಿಸಲಾಗಿರುತ್ತದೆ. ಸದ್ರಿ ಆದೇಶದಲ್ಲಿ ದಿನಾಂಕವನ್ನು ಜೂನ್ 15 ರಿಂದ ಜೂನ್ 30ರ ಒಳಗೆ ನಿಗದಿ ಪಡಿಸಲು ತಿಳಿಸಲಾಗಿರುತ್ತದೆ. ಆದುದರಿಂದ ಸರಕಾರದ ಆದೇಶದ ಪ್ರಕಾರವೇ ಪದವಿ ತರಗತಿಗಳ ಪ್ರಾರಂಭದ ದಿನಾಂಕವನ್ನು ಜೂನ್ 15 ರಿಂದ 30ರ ಒಳಗೆ ನಿಗದಿ ಪಡಿಸಲಾಗಿರುತ್ತದೆ.

ಪ್ರಸ್ತಾವನೆ ಕ್ರ.ಸಂ.2ಕ್ಕೆ ಸಂಬಂಧಿಸಿದಂತೆ, ಪ್ರಸ್ತುತ 3 ಜಿಲ್ಲೆಗಳಲ್ಲಿ ಮುಖ್ಯ ಕೇಂದ್ರಗಳಲ್ಲಿ ವಿಶ್ವವಿದ್ಯಾನಿಲಯವು ಪ್ರಾದೇಶಿಕ ಕೇಂದ್ರಗಳನ್ನು ಹೊಂದಿದೆ;

1. ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು, ದಕ್ಷಿಣ ಕನ್ನಡ.
2. ಸರಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು, ಉಡುಪಿ,
3. ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ, ಕೊಡಗು.

ವಿಶ್ವವಿದ್ಯಾನಿಲಯ ಸಿಂಡಿಕೇಟು ತೀರ್ಮಾನಿಸಿದಂತೆ, ಅಂಚೆ ತೆರಪಿನ ಶಿಕ್ಷಣ ಕಾರ್ಯಕ್ರಮಗಳ ಅನುಶಾಸನದ ಅವಕಾಶದಂತೆ ಹಾಗೂ ಯುಜಿಸಿ ಕಾಲ ಕಾಲಕ್ಕೆ ಹೊರಡಿಸಿದ ಷರತ್ತುಗಳಂತೆ ಎಲ್ಲಾ ತಾಲೂಕು ಮುಖ್ಯ ಕೇಂದ್ರಗಳು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸೌಕರ್ಯಗಳನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯದ ಅಂಚೆ ತೆರಪಿನ ಶಿಕ್ಷಣ ಕಾರ್ಯಕ್ರಮಗಳ ಕಲಿಕಾ ಕೇಂದ್ರಗಳನ್ನು (Study Centers) ಗಳನ್ನು ಆರಂಭಿಸಲು ಸೂಕ್ತ ಕ್ರಮ ಕೈಗೊಳ್ಳಬಹುದು.

ಪ್ರಸ್ತಾವನೆ ಕ್ರ.ಸಂ.3ಕ್ಕೆ ಸಂಬಂಧಿಸಿದಂತೆ, ಶೈಕ್ಷಣಿಕ ವೇಳಾಪಟ್ಟಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಅಧಿಸೂಚಿಸಲಾಗುತ್ತಿದ್ದು, ಸದ್ರಿ ವೇಳಾಪಟ್ಟಿಯಲ್ಲಿಯೇ ಪರೀಕ್ಷೆಗಳ ಪ್ರಾರಂಭದ ದಿನಾಂಕವನ್ನು ತಿಳಿಸಲಾಗಿರುತ್ತದೆ.

ಪ್ರಸ್ತಾವನೆ ಕ್ರ.ಸಂ.4ಕ್ಕೆ ಸಂಬಂಧಿಸಿದಂತೆ, ಸಭೆಗೆ ತಿಳಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:23(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲ0ಯ ಆವರಣದ ಜೋಡು ರಸ್ತೆಯ ಬದಿಗೆ (ಗ್ರಂಥಾಲಯ ಮತ್ತು ವಿಜ್ಞಾನ ಕಟ್ಟಡ ಎದುರು) ನಾಲ್ಕು ದಿಕ್ಕಿನಲ್ಲಿ ಗಡಿಯಾರವುಳ್ಳ ಅಲಂಕಾರಿಕ ಕಂಬವನ್ನು (decorative Post with four side clock) ಅಳವಡಿಸುವುದು.

ಅಂದಾಜು ಪಟ್ಟಿಯ ಮೊತ್ತ ರೂ. 5,55,000.00

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:24(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲ0ಯ ಆವರಣದ ಜೋಡು ರಸ್ತೆಯ ಎಡ ಮತ್ತು ಬಲ ಬದಿಗೆ ದಾರಿ ದೀಪದ ಅಲಂಕಾರಿಕ ಕಂಬಗಳನ್ನು (cast iron decorative Post) ಅಳವಡಿಸುವುದು.

ಅಂದಾಜು ಪಟ್ಟಿಯ ಮೊತ್ತ ರೂ. 44,20,000.00

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:25(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮುಖ್ಯ ನೀರು ಸರಬರಾಜು ವ್ಯವಸ್ಥೆಯ ಕೊಣಾಜೆ ನೀರು ಶುದ್ಧೀಗಾರ ಮತ್ತು ಮುಡಿಪು (ಮೆಲ್ಕಾರ್ ತಿರುವು) ಮಧ್ಯದ 3 ಕಿ.ಮೀ. ಭಾಗಕ್ಕೆ (ಇನ್‌ಫೋಸಿಸ್ ಮುಂಭಾಗದ 750 ಮೀ. ಉದ್ದವನ್ನು ಹೊರತುಪಡಿಸಿ) 250 ಮಿ.ಮೀ. ವ್ಯಾಸದ Ductile Iron ಕೊಳವೆಯನ್ನು ಒದಗಿಸಿ ಅಳವಡಿಸುವ ಕಾಮಗಾರಿ – ಅಂದಾಜುಪಟ್ಟಿಗೆ ಅನುಮೋದನೆ ಬಗ್ಗೆ.

ಅಂದಾಜು ಪಟ್ಟಿಯ ಮೊತ್ತ ರೂ.1,58,30,000.00

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:26(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆ ಕೂಲಿಯಾಳುಗಳ ಪೂರೈಕೆ (ಏಪ್ರಿಲ್ 2016 ರಿಂದ ಮಾರ್ಚ್ 2017ರವರೆಗೆ)

ಅಂದಾಜುಪಟ್ಟಿ ಮೊತ್ತ ರೂ. 12,74,000.00

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:27(2016)

ವಿಷಯ: ಮಾನ್ಯ ಕುಲಪತಿ0ುವರು ಮಂಗಳೂರು ವಿಶ್ವವಿದ್ಯಾನಿಲ0ು ಇವರ ಬಂಗಲೆಗೆ ಹೋಗುವ ರಸ್ತೆಗೆ ಅಲಂಕಾರಿಕ ಕಂಬಗಳನ್ನು (cast iron decorative Post) ಅಳವಡಿಸುವುದು.

ಅಂದಾಜು ಪಟ್ಟಿಯ ಮೊತ್ತ ರೂ. 3,25,000.00

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:28(2016)

ವಿಷಯ: Construction of Second floor over the Ladies Hostel (with dining block ground floor building) for Mangalore University at Mangalagangothri Campus D.K. District, Karnataka State.

Est. Amount Rs. 1,52,80,000.00

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:29(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಕಾವೇರಿ ಅತಿಥಿಗೃಹದ ನವೀಕರಣ ಕಾಮಗಾರಿ – ನೀರು ಸರಬರಾಜು ಕಾಮಗಾರಿಯ ಹೆಚ್ಚುವರಿ ಐಟಂಗಳ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:30(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ನೇತ್ರಾವತಿ ಅತಿಥಿಗೃಹದ ನವೀಕರಣ ಹಾಗೂ ಆವರಣಗೋಡೆ ಕಾಮಗಾರಿ –ನೀರು ಸರಬರಾಜು ಮತ್ತು ನಿರ್ಮಲೀಕರಣ ವ್ಯವಸ್ಥೆ ಒದಗಿಸುವುದು – ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಕೆಲಸಗಳ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:31(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಮಾನ್ಯ ಕುಲಪತಿಯವರ ಬಂಗಲೆ ಮತ್ತು ನೇತ್ರಾವತಿ ಅತಿಥಿಗೃಹದ ಮುಂಭಾಗ ಹೈಮಾಸ್ಕ್ ದೀಪಗಳನ್ನು ಅಳವಡಿಸುವ ಬಗ್ಗೆ.

ಅಂದಾಜು ಮೊತ್ತ ರೂ. 4,49,650.00

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:32(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಕಾರ್ಯಕಾರಿ ಅಭಿಯಂತರರ ಕಚೇರಿಯಿಂದ 5.00 ಲಕ್ಷಕ್ಕಿಂತ ಒಳಪಟ್ಟು ನಿರ್ವಹಿಸುವ ಕಾಮಗಾರಿಗಳ ಅಂದಾಜುಪಟ್ಟಿಗೆ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ನಿರ್ವಹಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:33 (2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಅಧೀನಕ್ಕೊಳಪಟ್ಟಿರುವ ಕೊಡಗು ಜಿಲ್ಲೆ ಚಿಕ್ಕಳುವಾರ ಸ್ನಾತಕೋತ್ತರ ಕೇಂದ್ರದ ಆವರಣದಲ್ಲಿ ಹೊಸದಾಗಿ ನಿರ್ಮಾಣವಾಗಲಿರುವ ಮಹಿಳೆಯರ ವಸತಿ ನಿಲಯಕ್ಕೆ ನೀರು ಸರಬರಾಜು ಮತ್ತು ನಿರ್ಮಲೀಕರಣ ಕಾಮಗಾರಿ– ಹೆಚ್ಚುವರಿ ಪರಿಮಾಣಗಳ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:34 (2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ Electronics ಹಾಗೂ Usic ವಿಭಾಗಗಳ ದುರಸ್ತಿ ಕಾಮಗಾರಿ – ಅಂದಾಜು ಅನುಮೋದನೆ ಬಗ್ಗೆ.

ಅಂದಾಜು ಮೊತ್ತ ರೂ.44,55,000.00

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:35 (2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ನೇತ್ರಾವತಿ ಅತಿಥಿಗೃಹದ ನವೀಕರಣ ಹಾಗೂ ಆವರಣ ಗೋಡೆ ಕಾಮಗಾರಿ - ಕಾಲಾವಧಿ ವಿಸ್ತರಣೆ

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:36 (2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಟಿ.ಎಫ್ ಮಾದರಿ ವಸತಿ ಬ್ಲಾಕ್ 1,2,3 ದುರಸ್ತಿ Galvolume sheet - ಕಾಲಾವಧಿ ವಿಸ್ತರಣೆ

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:37 (2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ವಿಜ್ಞಾನ ಸಂಕೀರ್ಣ ಕಟ್ಟಡದ ಮೊದಲ ಮತ್ತು ಎರಡನೇ ಅಂತಸ್ತು ಹಾಗೂ ಛಾವಣಿಯ ದುರಸ್ತಿ ಮತ್ತು ನವೀಕರಣ ಕಾಮಗಾರಿ – ಹೆಚ್ಚುವರಿ ಐಟಂಗಳ ಅನುಮೋದನೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:38 (2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಉದ್ಯೋಗ ಮಾಹಿತಿ ಕೇಂದ್ರ ಕಟ್ಟಡಕ್ಕೆ ಮೊದಲನೇ ಅಂತಸ್ತಿನ ನಿರ್ಮಾಣ ಕಾಮಗಾರಿ–ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜು ಮೊತ್ತ ರೂ. 82,80,000.00

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:39(2016)

ವಿಷಯ: Quotation for the work for Conducting detailed survey, designing, preparation of D.P.R. for underground drainage system at Mangalore University, Mangalagangothri.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:40(2016)

ವಿಷಯ: ಮಂಗಳೂರು ವಿಶ್ವವ್ಯಾನಿಲಯ ಅಧೀನಕ್ಕೊಳಪಟ್ಟ ಫೀ.ಮಾ.ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿಯ ಗ್ರಂಥಾಲಯ ಕಟ್ಟಡದ ಮೊದಲನೇ ಅಂತಸ್ತಿನಲ್ಲಿರುವ ಅರ್ಥಶಾಸ್ತ್ರ, ಹಿಂದಿ ವಿಭಾಗ ಮತ್ತು ಕಂಪ್ಯೂಟರ್ ಲ್ಯಾಬ್‌ನ ವಿಭಾಗ ಕೊಠಡಿಗಳ ಗೋಡೆಗೆ ಬಣ್ಣ ಬಳಿಯುವ ಕಾಮಗಾರಿ.

ಅಂದಾಜು ಪಟ್ಟಿ ಮೊತ್ತ ರೂ. 1,93,579.00

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾಸ.1:41(2016)

ವಿಷಯ: Expression of Interest for Providing Architectural Interior Acoustic and structural design consultancy for the construction of Internationl Student Hostel Buildings at Mangalore University, Mangalagangothri.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.01.2016ರ ಕಟ್ಟಡ ಸಮಿತಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾಸ.1:42(2016)

ವಿಷಯ: UGC BSR – Start up Research Project – Digital Rotary Evaporator ಉಪಕರಣ ಖರೀದಿ ಪ್ರಸ್ತಾವನೆ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 28.01.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾಸ.1:43(2016)

ವಿಷಯ: DST – SERB ಪ್ರಾಜೆಕ್ಟ್ ಜೀವ ವಿಜ್ಞಾನ ವಿಭಾಗ – ಉಪಕರಣ ಖರೀದಿಗೆ ಸಂಬಂಧಿಸಿದ ಪ್ರಸ್ತಾವನೆ ಮಂಜೂರಾತಿ ಬಗ್ಗೆ

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 28.01.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾಸ.1:44(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ Turnitin Anti Plagiarism Chek Softwareನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ Turnitin Anti Plagiarism Chek Softwareನ್ನು ಸರ್ಕಾರಿ ಖರೀದಿ ನಿಯಮಗಳಿಗೆ ಒಳಪಟ್ಟು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾಸ.1:45(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ – Indian Citation Index (ICI) ಜರ್ನಲ್ಸ್‌ನ ಚಂದಾದಾರಿಕೆ ಶುಲ್ಕ ಮಂಜೂರಾತಿ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 28.01.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾಸ.1:46(2016)

ವಿಷಯ: ಮಂಗಳೂರು ವಿಶ್ವವಿದ್ಯನಿಲಯ ಆವರಣ ಮತ್ತು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಭದ್ರತಾ ವ್ಯವಸ್ಥೆಯ ಗುತ್ತಿಗೆ ಅವಧಿ ವಿಸ್ತರಣೆ – ಘಟನೋತ್ತರ ಅನುಮೋದನೆಗಾಗಿ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಮಂಗಳೂರು ವಿಶ್ವವಿದ್ಯನಿಲಯ ಆವರಣ ಮತ್ತು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಭದ್ರತಾ ವ್ಯವಸ್ಥೆಯ ಗುತ್ತಿಗೆ ಅವಧಿಯನ್ನು ಅದೇ ದರ ಮತ್ತು ಷರತ್ತಿನೊಂದಿಗೆ ದಿನಾಂಕ 30.04.2016ರ ವರೆಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾಸ.1:47(2016)

ವಿಷಯ: ನವೆಂಬರ್ / ಡಿಸೆಂಬರ್ 2015ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯ ತನಿಖಾ ಸಮಿತಿಯು ದಿನಾಂಕ 27.01.2016ರಂದು ತನಿಖೆ ನಡೆಸಿ ಸಲ್ಲಿಸಿರುವ ವರದಿಯನ್ನು ವಿಶ್ವವಿದ್ಯಾನಿಲಯ ಕಾಯ್ದೆ 77(2) (ಎ) ಪ್ರಕಾರ ಸಿಂಡಿಕೇಟ್ ಸಭೆಯು ಒಪ್ಪಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾಸ.1:48(2016)

ವಿಷಯ: ಶ್ರೀ ಮಹಮ್ಮದ್ ರಾಝಿಕ್ ವೈ. ಇವರ ಬಗ್ಗೆ ವಿಶ್ವವಿದ್ಯಾನಿಲಯದ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿ ಸಭೆಯು ನೀಡಿರುವ ಪುನರ್ ಪರಿಶೀಲನಾ ವರದಿ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಈ ಬಗ್ಗೆ ಸಭೆಯು ಚರ್ಚಿಸಿ, ಸದರಿ ವಿದ್ಯಾರ್ಥಿಗೆ ಆ ಪರೀಕ್ಷೆಗೆ ಮಾತ್ರ ಶಿಕ್ಷೆಯನ್ನು ಸೀಮಿತಗೊಳಿಸಿ ಉಳಿಕೆ ಪತ್ರಿಕೆಗಳ ಪರೀಕ್ಷೆಗಳಿಗೆ ಹಾಜರಾಗಲು ಅನುಮತಿ ನೀಡಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾಸ.1:49(2016)

ವಿಷಯ: ಕು. ರಕ್ಷಿತಾ ಕೆ. ನೋ. ಸಂಖ್ಯೆ. 112160510 ಬಿ.ಬಿ.ಎಂ. ಪದವಿ, ಇವರ ನಕಲಿ ಅಂಕ ಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳ ಬಗ್ಗೆ ಮಂಗಳೂರು ವಿಶ್ವವಿದ್ಯಾನಿಲಯ ಪರೀಕ್ಷಾ ಅವ್ಯವಹಾರ ಸಮಿತಿಯು ನಡೆಸಿದ ತನಿಖಾ ವರದಿ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯವನ್ನು ಪರಿಶೀಲಿಸಿ, ಈ ಬಗ್ಗೆ ನಿಯಮಗಳ ರೀತಿ ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ ಇವರು ಪೋಲೀಸ್ ದೂರನ್ನು ಸಲ್ಲಿಸುವಂತೆ ಮತ್ತು ಸಂಬಂಧಿಸಿದ ಸಂಸ್ಥೆಯವರು ಸದರಿ ವಿದ್ಯಾರ್ಥಿಯ ನೈಜತೆ ಕುರಿತಂತೆ ಕೋರಿರುವ ವಿವರಗಳನ್ನು ನಿಯಮಗಳ ಪ್ರಕಾರ ಪರಿಶೀಲನಾ ವರದಿ ಸಲ್ಲಿಸುವಂತೆ ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾಸ.1:50(2016)

ವಿಷಯ: ಕುಲಸಚಿವರ (ಪರೀಕ್ಷಾಂಗ)ರ ಕಛೇರಿಗೆ ಎರಡು ಹೊಸ ಜೆರಾಕ್ಸ್ ಯಂತ್ರಗಳನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ದಿನಾಂಕ 28.01.2016ರ ಖರೀದಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾಸ.1:51(2016)

ವಿಷಯ: ಪುರುಷರ ವಸತಿ ನಿಲಯಕ್ಕೆ ಚಪಾತಿ ಮೇಕಿಂಗ್ ಮೆಷಿನ್ ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಈ ವಿಷಯಕ್ಕೆ ಸಂಬಂಧಿಸಿಂತೆ ದಿನಾಂಕ 28.01.2016ರ ಖರೀದಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾಸ.1:52(2016)

ವಿಷಯ: ಶಿಕ್ಷಕರ ಪರಿವೀಕ್ಷಣಾವಧಿಯನ್ನು ಘೋಷಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಶಿಕ್ಷಕರ ಪರಿವೀಕ್ಷಣಾವಧಿಯನ್ನು ಘೋಷಿಸುವ ಬಗ್ಗೆ ಸಲ್ಲಿಸಿದ ಜೇಷ್ಟತಾ ಪಟ್ಟಿಯ ಕ್ರಮ ಸಂಖ್ಯೆ 1 ರಿಂದ 46 ರಲ್ಲಿ ಕ್ರಮ ಸಂಖ್ಯೆ 9 ಡಾ. ಪಾರ್ವತಿ ಎ.ಎ ಅವರನ್ನು ಹೊರತುಪಡಿಸಿ ಪಟ್ಟಿಯಲ್ಲಿನ ಇತರೆ ಎಲ್ಲಾ ಶಿಕ್ಷಕರ ಪರಿವೀಕ್ಷಣಾವಧಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ಪ್ರಕರಣ 29 (2) (ಎ) ರ ಪ್ರಕಾರ ಅನುಮೋದಿಸಲಾಯಿತು.

ಡಾ.ಪಾರ್ವತಿ ಅಪ್ಪಯ್ಯ, ಪ್ರಾಂಶುಪಾಲರು, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರು ನವೆಂಬರ್ /ಡಿಸೆಂಬರ್ 2015ರ ಪರೀಕ್ಷೆಗಳನ್ನು ಅಂದರೆ ಮರು ಪರೀಕ್ಷೆ ಮಾಡುವಾಗ ನಿಯಮ ಉಲ್ಲಂಘಿಸಿರುವ ಬಗ್ಗೆ ಚರ್ಚಿಸಿ, ಡಾ.ಪಾರ್ವತಿ ಅಪ್ಪಯ್ಯ, ಪ್ರಾಂಶುಪಾಲರು ಅವರ ಪರಿವೀಕ್ಷಣಾ ಅವಧಿಯ ಘೋಷಣೆಯನ್ನು ಬದಿಗಿರಿಸಿ ನಿಯಮಗಳನ್ನು ಉಲ್ಲಂಘಿಸಿರುವುದಕ್ಕೆ ಶೋಕಾಸ್ ನೋಟಿಸ್ ನೀಡುವಂತೆ ಮತ್ತು ಈ ಬಗ್ಗೆ ಸಮಿತಿಯನ್ನು ನೇಮಿಸಿ ವರದಿ ಪಡೆಯುವಂತೆ ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾಸ.1:53(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯಕ್ಕೆ ಹೊಸ ವಾಹನ ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯಕ್ಕೆ ವಾಹನದ ಅವಶ್ಯಕತೆಯ ಬಗ್ಗೆ ಮಾನ್ಯ ಕುಲಪತಿಗಳು ಸಭೆಗೆ ವಿವರಿಸಿದರು. ಸದರಿ ವಿಚಾರವನ್ನು ಚರ್ಚಿಸಿದ ಸಭೆಯು ಮಹೇಂದ್ರ ಸ್ಕೋರ್ಪಿಯೋ ವಾಹನವನ್ನು ನಿಯಮಗಳ ಪ್ರಕಾರ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾಸ.1:54(2016)

ವಿಷಯ: ಎಸ್.ಎಸ್.ಬಿ.ಇ.ಟಿ., ಚಾಮರಾಜಪೇಟೆ, ಬೆಂಗಳೂರು ಸಂಸ್ಥೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಅಂಚೆತೆರಪಿನ ಶಿಕ್ಷಣ ತರಗತಿಗಳಿಗೆ ಅಧ್ಯಯನ ಕೇಂದ್ರವನ್ನಾಗಿ ಪ್ಯಾರ 3 (ಜಿ) ಅಂಚೆತೆರಪಿನ ಶಿಕ್ಷಣ ನಿರ್ದೇಶನಾಲಯ ಮಂಗಳೂರು ಇದರ ಪರಿನಿಯಮ ಪ್ರಕಾರ ಅಂಗೀಕರಿಸುವ ಕುರಿತು.

**ಸಭೆಯ ದಿನಾಂಕ: 02.02.2016**

ನಿರ್ಣಯ: ದಿನಾಂಕ 25.01.2016ರ ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾಸ.1:55(2016)

ವಿಷಯ: Co-ordinator ICT Initiatives ನ ಉಪಯೋಗಕ್ಕಾಗಿ Polycom 500 A Multipoint Video Conference System ನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: Co-ordinator, ICT Initiatives ಉನ್ನತ ಶಿಕ್ಷಣ ಇಲಾಖೆಯ ಜೊತೆ ಹಾಗೂ ಇತರ ಕಾರ್ಯದರ್ಶಿಗಳೊಂದಿಗೆ online video ಕಾರ್ಯಕ್ರಮಕ್ಕೆ ಪೂರಕವಾಗಿ Multipoint Video Conference Systemನ ಉಪಕರಣಗಳನ್ನು ಸರ್ಕಾರದ DGS&D ದರ ಪಟ್ಟಿಯಂತೆ ಖರೀದಿಸಲು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಕಾನೂನು ಘಟಕ ಸಾಸ.1:56(2016)

ವಿಷಯ: ಶ್ರೀ ಬಿ. ಪ್ರಮೋದ್, ನ್ಯಾಯವಾದಿ, ಬೆಂಗಳೂರು ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ನ್ಯಾಯವಾದಿಗಳ ಯಾದಿಗೆ ಸೇರಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ವಿಶ್ವವಿದ್ಯಾನಿಲಯದ ಯಾದಿಯಲ್ಲಿರುವ ನ್ಯಾಯವಾದಿಗಳು ಪ್ರತಿನಿಧಿಸುವ ಪ್ರಕರಣಗಳಿಗೆ ನಿಗದಿಪಡಿಸಿರುವ ದರಕ್ಕೆ ಸಮ್ಮತಿ ಸೂಚಿಸುವ ಷರತ್ತಿಗೊಳಪಟ್ಟು ಶ್ರೀ ಬಿ. ಪ್ರಮೋದ್, ನ್ಯಾಯವಾದಿ, ಬೆಂಗಳೂರು

ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ನ್ಯಾಯವಾದಿಗಳ ಯಾದಿಗೆ ಸೇರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾಸ.1:57(2016)

ವಿಷಯ: ಶೈಕ್ಷಣಿಕ ವರ್ಷ 2008–09 ನೇ ಸಾಲಿನಲ್ಲಿ ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು ವಿದ್ಯಾಸಂಸ್ಥೆಯಲ್ಲಿ ಎಂ.ಕಾಂ. (ಅಪ್ಲೈಡ್ ಫೈನಾನ್ಸ್ ಆ್ಯಂಡ್ ಅಕೌಂಟಿಂಗ್) ಕೋರ್ಸಿಗೆ ಪ್ರವೇಶಾತಿ ಮಾಡಿರುವ ಏಳು ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಅನುಮೋದಿಸಿ ಪದವಿ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯವನ್ನು ಸುಧೀರ್ಘವಾಗಿ ಚರ್ಚಿಸಿ, ಸರಕಾರದ ಪ್ರಧಾನ ಕಾರ್ಯದರ್ಶಿಯವರು ಪತ್ರ ಸಂ.ಇಡಿ 33 ಯುಡಿವಿ 2011, ದಿನಾಂಕ 26.05.2011 ರಲ್ಲಿ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಎಂ.ಕಾಂ. (ಅಪ್ಲೈಡ್ ಫೈನಾನ್ಸ್ ಆ್ಯಂಡ್ ಅಕೌಂಟಿಂಗ್) ಪದವಿಯ ವಿನಿಯಮವನ್ನು ವಿಶ್ವವಿದ್ಯಾನಿಲಯವು ದಿನಾಂಕ 10.06.2009ರಂದು ಜಾರಿಗೆ ತಂದಿರುವುದರಿಂದ ಈ ವಿನಿಯಮವನ್ನು ಶೈಕ್ಷಣಿಕ ವರ್ಷ 2008–09ರಲ್ಲಿ ಪ್ರವೇಶಾತಿ ನೀಡಿದ ವಿದ್ಯಾರ್ಥಿಗಳಿಗೆ ಪೂರ್ವಾನ್ವಯಗೊಳಿಸಬಾರದಾಗಿ ಸೂಚನೆ ನೀಡಿ ಸಂತ ಅಲೋಶಿಯಸ್ ಕಾಲೇಜು ಶೈಕ್ಷಣಿಕ ವರ್ಷ 2008–09ನೇ ಸಾಲಿನಲ್ಲಿ ಎಂ.ಕಾಂ. (ಅಪ್ಲೈಡ್ ಫೈನಾನ್ಸ್ ಆ್ಯಂಡ್ ಅಕೌಂಟಿಂಗ್) ಕೋರ್ಸಿಗೆ ಪ್ರವೇಶಾತಿ ನೀಡಿರುವ ಏಳು ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಅನುಮೋದಿಸಲು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಸದರಿ ವಿಚಾರವನ್ನು ಸಿಂಡಿಕೇಟು ಸಭೆಯು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮಾನವೀಯ ನೆಲೆಯಲ್ಲಿ ಪರಿಗಣಿಸಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಅನುಮೋದಿಸಿತು. ಸದರಿ ತೀರ್ಮಾನವು one time measure ಮಾತ್ರ ಹಾಗೂ ಪೂರ್ವಾನ್ವಯಗೊಳಿಸ ಬಾರದೆಂದು ನಿರ್ಧರಿಸಲಾಯಿತು. ಹಾಗೂ ಸಭೆಯು ಸಂತ ಅಲೋಶಿಯಸ್ ಕಾಲೇಜಿಗೆ ಎಚ್ಚರಿಕೆಯ ಪತ್ರವನ್ನು ಬರೆಯಬೇಕೆಂದು ಮತ್ತು ಇನ್ನು ಮುಂದೆ ಇಂಥಹ ಘಟನೆಗಳು ಜರುಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಕುಲಸಚಿವರು ಪತ್ರ ಬರೆಯಲು ತೀರ್ಮಾನಿಸಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾಸ.1:58(2016)

ವಿಷಯ: ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಸೂಚನೆ ಪ್ರಕಾರ BBM, MCJ, MCMS, MLISc, MIB, MHRD, MBA (Tourism Administration) ಮತ್ತು M.Psy (HRDM) ಕೋರ್ಸುಗಳ ಶಿರೋನಾಮೆ ಬದಲಾವಣೆ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯವನ್ನು ಚರ್ಚಿಸಿ, MLISc ಪದವಿಯ ಶಿರೋನಾಮೆಯನ್ನು ಹೊರತು ಪಡಿಸಿ ಪ್ರಸ್ತಾವನೆಯಲ್ಲಿ ಸಲ್ಲಿಸಿದ್ದ ಇತರೆ ಎಲ್ಲಾ ಕೋರ್ಸುಗಳ ಶಿರೋನಾಮೆಯನ್ನು ಯುಜಿಸಿ ನಿಯಮದಂತೆ ಬದಲಾವಣೆ ಮಾಡಲು ಸಮ್ಮತಿಸಿ ಅನುಮೋದಿಸಲಾಯಿತು. MLISc ಪದವಿಗೆ ಸಂಬಂಧಿಸಿದಂತೆ ಸದರಿ ಕೋರ್ಸಿಗೆ ಪ್ರವೇಶಾರ್ಹತೆಯು BLISc ಇರುವುದರಿಂದ ರಾಜ್ಯದಲ್ಲಿನ ಇತರೆ ವಿಶ್ವವಿದ್ಯಾನಿಲಯಗಳು ಮಾಡಿರುವ ಶಿರೋನಾಮೆ ಬದಲಾವಣೆಯನ್ನು ಸದ್ಯಕ್ಕೆ ಅಳವಡಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾಸ.1:59(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಿಗೆ ಲ್ಯಾಬ್ ಟೇಬಲ್ ಮತ್ತು ಸ್ಟೂಲ್‌ಗಳನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 02.02.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 28.01.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.